ದೂರವಾಣಿ ಸಂಖ್ಯೆ: 080- 22211707
ಫ್ಯಾಕ್ಸ್‌ಸಂಖ್ಯೆ : 080 22121982

ಇಮೇಲ್: cafkptcl@gmail.com
ಜಾಲತಾಣ: www.kptcl.karnataka.gov.in

## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

ಸಂ:ಕವಿಪ್ರನಿನಿ/ಕೆಸಿಒ–32/29274/2021-22 / 5530

ನೊಂದಾಯಿತ ಕಂಪನಿಯ ಕಚೇರಿ,
ನಿಗಮ ಕಚೇರಿ,
ಕಾವೇರಿ ಭವನ, ಕೆ.ಜಿ.ರಸ್ತೆ
ಬೆಂಗಳೂರು 5600 09

ದಿನಾಂಕ : 17 DEC 2021

## ಸುತ್ತೋಲೆ

ವಿಷಯ: 2021-22ನೇ ಸಾಲಿಗೆ ಲೆಕ್ಕ ಗುಂಪು 74ಕ್ಕೆ ಹೆಚ್ಚುವರಿ ಕಂದಾಯ ಆಯವ್ಯಯ ಹಂಚಿಕೆ ಹಾಗು ಹೊಸ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಪತ್ರ ಸಂಖ್ಯೆ: ಆಸ(ಲೆ ಮತ್ತು ಸಂ)/ನಿ(ಹ)/ಕೆ.ಸಿ.ಒ–32/ 29263–69/21-22/2144 ದಿನಾಂಕ:15.07.2021.

*****

ಈ ಕಛೇರಿಯ ಉಲ್ಲೇಖಿತ ಪತ್ರದಲ್ಲಿ ಲೆಕ್ಕ ಘಟಕಗಳಿಗೆ 2021-22ನೇ ಸಾಲಿಗೆ ಲೆಕ್ಕ ಗುಂಪು 74, 75, 76, 77, 78 ಹಾಗು 79ರ ಅಡಿ ಕಂದಾಯ ಆಯವ್ಯಯವನ್ನು ಹಂಚಿಕೆ ಮಾಡಿರುವುದು ಸರಿಯಷ್ಟೇ. ಸದರೀ ಉಲ್ಲೇಖಿತ ಪತ್ರದ ಮಾರ್ಗಸೂಚಿಯ ಕಂಡಿಕೆ (2) ಮತ್ತು (7)ರಲ್ಲಿ ಈ ಕೆಳಕಂಡಂತಿರುತ್ತದೆ.

> "The Budget under the Account code 74.1, 74.116, 74.2, 74.3 and 74.510 shall be utilized strictly for the works to be approved by Director (Transmission) for FY-2021-22".

> "Re-appropriation of the Revenue Budget within the same Account group in an Accounting unit shall be approved by jurisdictional Zonal CEE/Controller with a copy marked to this office".

ಸದರಿ ಮಾರ್ಗಸೂಚಿಯ ಕಂಡಿಕೆ '2'ರ ಅನುಸಾರ, ನಿರ್ದೇಶಕರು (ಪ್ರಸರಣ), ಕವಿಪ್ರನಿನಿ ರವರು ಲೆಕ್ಕ ಶೀರ್ಷಿಕೆ 74.1, 74.116, 74.2, 74.3 ಮತ್ತು 74.510ರ ಅಡಿ 2021-22ನೇ ಸಾಲಿನಲ್ಲಿ ಕೈಗೊಳ್ಳಬಹುದಾದ ದುರಸ್ತಿ ಮತ್ತು ನಿರ್ವಹಣೆಯ ಕಾಮಗಾರಿಗಳ ವಿವರಗಳ ಪಟ್ಟಿಗೆ ಟಿಪ್ಪಣಿ ಸಂಖ್ಯೆ: B9/14644/2020-21 ದಿನಾಂಕ:28.07.2021 ಹಾಗು ಟಿಪ್ಪಣಿ ಸಂಖ್ಯೆ: D(T)/EA1/Note-1/ 2021-22 ದಿನಾಂಕ:09.09.2021ರಲ್ಲಿ ಅನುಮೋದನೆ ನೀಡಿರುತ್ತಾರೆ.

ದಿನಾಂಕ:01.12.2021ರಂದು ನಡೆದ ಸಭೆಯಲ್ಲಿ ಎಲ್ಲಾ ಪ್ರಸರಣ ವಲಯಗಳ ಮುಖ್ಯ ಇಂಜಿನಿಯರ್(ವಿ)ರವರುಗಳು ಈ ಕೆಳಕಂಡ ವಾಸ್ತವಿಕ ಅಂಶಗಳನ್ನು ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತಂದಿರುತ್ತಾರೆ.

1. ದುರಸ್ತಿ ಮತ್ತು ನಿರ್ವಹಣೆ ಅಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮುಂಚೆ, ಕಂದಾಯ ಆಯವ್ಯಯದ ಅವಶ್ಯಕತೆ ಇರುತ್ತದೆ. ಒಂದು ವೇಳೆ ಸದರಿ ಕಾಮಗಾರಿಯು ಆ ಆರ್ಥಿಕ ವರ್ಷದಲ್ಲಿ ಪೂರ್ಣಕೊಳ್ಳದಿದ್ದಲ್ಲಿ, ಕಂದಾಯ ಆಯವ್ಯಯವು ಉಳಿದು ಬಿಡುತ್ತದೆ.

2. ಈ ಕಛೇರಿಯ ಉಲ್ಲೇಖಿತ ಪತ್ರದ ಮಾರ್ಗಸೂಚಿ (2)ರ ಪ್ರಕಾರ, 2021-22ನೇ ಸಾಲಿಗೆ ಅನುಮೋದಿತ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳ ಬೇಕು ಎಂದು ಸೂಚಿಸಿರುವುದರಿಂದ, ತುರ್ತು ಸಂದರ್ಭಗಳಲ್ಲಿ ನಿರ್ವಹಿಸಬೇಕಾದ ಕಾಮಗಾರಿಗಳಿಗೆ ಅನುಮೋದನೆ ಹಾಗೂ ಕಂದಾಯ ಆಯವ್ಯಯ ಪಡೆಯುವಲ್ಲಿ ವಿಳಂಬವಾಗುವ ಸಂಭವವಿರುತ್ತದೆ.

3. 66ಕೆವಿ ಉಪಕೇಂದ್ರ/110ಕೆವಿ/220ಕೆವಿ/400ಕೆವಿ ಸ್ಟೇಷನ್‌ನಲ್ಲಿ ಯಾವುದೇ ಉಪಕರಣಗಳು ಮೊದಲೇ ವಿಫಲಗೊಳ್ಳುತ್ತದೆ ಎಂದು ಊಹಿಸಲು ಸಾಧ್ಯವಾಗುವುದಿಲ್ಲ.

ಆದುದರಿಂದ, ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಪರಿಷ್ಕೃತ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. 2021-22ನೇ ಸಾಲಿಗೆ ಪ್ರಸರಣ ವಲಯದ ಮುಖ್ಯ ಇಂಜಿನಿಯರ್(ವಿ) ರವರುಗಳಿಗೆ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ 74.1, 74.116 ಮತ್ತು 74.510ರ ಅಡಿ ಹೆಚ್ಚುವರಿಯಾಗಿ lumpsum ಕಂದಾಯ ಆಯವ್ಯಯವನ್ನು ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ.

(ರೂ.ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಪ್ರಸರಣ ವಲಯದ ಹೆಸರು | ಲೆಕ್ಕ ಶೀರ್ಷಿಕೆ 74.1, 74.116 ಮತ್ತು 74.510ರ ಅಡಿ ಹಂಚಿಕೆ ಮಾಡಿರುವ ಹೆಚ್ಚುವರಿ ಕಂದಾಯ ಆಯವ್ಯಯ |
|---|---|---|
| 1 | ಬೆಂಗಳೂರು | 03.00 |
| 2 | ಮೈಸೂರು | 02.00 |
| 3 | ತುಮಕೂರು | 02.00 |
| 4 | ಬಾಗಲಕೋಟೆ | 03.00 |
| 5 | ಹಾಸನ | 02.00 |
| 6 | ಕಲಬುರಗಿ | 02.00 |
| | **ಒಟ್ಟು** | **14.00** |

2. ಪ್ರಸರಣ ವಲಯದ ಮುಖ್ಯ ಇಂಜಿನಿಯರ್(ವಿ) ರವರು ಹಂಚಿಕೆ ಮಾಡಿರುವ ಹೆಚ್ಚುವರಿ lumpsum ಕಂದಾಯ ಆಯವ್ಯಯದಲ್ಲಿ, ತುರ್ತು ಹಾಗು ಅಗತ್ಯ ಕಾಮಗಾರಿಗಳನ್ನು ಮಾತ್ರ ಗುರುತಿಸಿ, ಅಗತ್ಯ ಕಂದಾಯ ಆಯವ್ಯಯವನ್ನು ಟಿ.ಎಲ್ ಮತ್ತು ಎಸ್.ಎಸ್ ವಿಭಾಗಗಳಿಗೆ ಲೆಕ್ಕ ಶೀರ್ಷಿಕೆವಾರು ಮರು ಹಂಚಿಕೆ ಮಾಡುವುದು. ಅನುಮೋದಿತ ತುರ್ತು ಹಾಗು ಅಗತ್ಯ ಕಾಮಗಾರಿಯ ಹೆಸರು ಹಾಗು ಟಿ.ಎಲ್ ಮತ್ತು ಎಸ್.ಎಸ್ ವಿಭಾಗಗಳಿಗೆ ಲೆಕ್ಕ ಶೀರ್ಷಿಕೆವಾರು ಮರು ಹಂಚಿಕೆ ಮಾಡಲಾದ ಕಂದಾಯ ಆಯವ್ಯಯ ವಿವರಗಳನ್ನು ತಪ್ಪದೇ ಈ ಕಛೇರಿಗೆ ಸಲ್ಲಿಸುವುದು.

3. ಮೇಲಿನ ಕಂಡಿಕೆ(1)ರಲ್ಲಿ ಹಂಚಿಕೆ ಮಾಡಿರುವ ಕಂದಾಯ ಆಯವ್ಯಯವು ಬಳಕೆಯಾದ ನಂತರ, ತುರ್ತು ಹಾಗು ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಬೇಕಾದ ಸಂದರ್ಭಗಳಲ್ಲಿ ಮಾತ್ರ, ಪ್ರಸರಣ ವಲಯದ ಮುಖ್ಯ ಇಂಜಿನಿಯರ್(ವಿ) ರವರುಗಳು, ವಲಯ ವ್ಯಾಪ್ತಿಗೆ ಸಂಬಂಧಿಸಿದಂತೆ, ಹೆಚ್ಚಿನ ಕಂದಾಯ ಆಯವ್ಯಯಕ್ಕೆ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸುವುದು.

4. ಪ್ರಸರಣ ವಲಯದ ಮುಖ್ಯ ಇಂಜಿನಿಯರ್(ವಿ) ರವರುಗಳಿಗೆ ತುರ್ತು ಹಾಗು ಅವಶ್ಯ ಕಾಮಗಾರಿಗಳನ್ನು ಅನುಮೋದಿಸಲು ಹಾಗು ಕಂದಾಯ ಆಯವ್ಯಯವನ್ನು ಮರು ಹಂಚಿಕೆ ಮಾಡಲು ಮೇಲಿನ ಕಂಡಿಕೆ(1)ರ ಪ್ರಕಾರ ಅಧಿಕಾರ ನೀಡಿರುವ ಪ್ರಯುಕ್ತ, ಟಿ.ಎಲ್ ಮತ್ತು ಎಸ್.ಎಸ್ ವಿಭಾಗಾಧಿಕಾರಿಗಳು ತುರ್ತು ಹಾಗು ಅವಶ್ಯ ಕಾಮಗಾರಿಗಳನ್ನು ಕೈಗೊತ್ತಿಕೊಳ್ಳುವ ಮುಂಚೆ ವಲಯದ ಮುಖ್ಯ ಇಂಜಿನಿಯರ್(ವಿ) ರವರಿಂದ ಅನುಮೋದನೆ ಹಾಗು ಅಗತ್ಯ ಕಂದಾಯ ಆಯವ್ಯಯವನ್ನು ಮರು ಹಂಚಿಕೆ ಮಾಡಿಸಿ ಕೊಳ್ಳಲು ಸೂಚಿಸಲಾಗಿದೆ.

5. ಇನ್ನು ಮುಂದೆ ಟಿ.ಎಲ್ ಮತ್ತು ಎಸ್.ಎಸ್ ವಿಭಾಗಾಧಿಕಾರಿಗಳು ಹೆಚ್ಚಿನ ಕಂದಾಯ ಆಯವ್ಯಯಕ್ಕೆ ಸಂಬಂಧಿಸಿದಂತೆ ನೇರವಾಗಿ ಈ ಕಛೇರಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವುದನ್ನು ನಿರ್ಬಂಧಿಸಲಾಗಿದೆ.

6. ವಿಭಾಗದ ಲೆಕ್ಕಾಧಿಕಾರಿಗಳು ತುರ್ತು ಮತ್ತು ಅವಶ್ಯ ಕಾಮಗಾರಿಯ ಅಡಿ ದುರಸ್ತಿ ಮತ್ತು ನಿರ್ವಹಣೆಯ ಹುಂಡಿಗಳು/ ನಿಧಿ ಕೋರಿಕೆಯ ಪ್ರಸ್ತಾವನೆಗಳನ್ನು ಸಲ್ಲಿಸುವಾಗ, ತಪ್ಪದೇ ವಲಯದ ಮುಖ್ಯ ಇಂಜಿನಿಯರ್(ವಿ) ರವರಿಂದ ಅನುಮೋದಿಸಲ್ಪಟ್ಟ ಕಾಮಗಾರಿಯ ಹಾಗು ಮರು ಹಂಚಿಕೆ ಮಾಡಲಾದ ಕಂದಾಯ ಆಯವ್ಯಯ ವಿವರಗಳ ಪತ್ರದ ಪ್ರತಿಯನ್ನು ಹಾಗು ಹುಂಡಿಯ/ ನಿಧಿ ಕೋರಿಕೆ ಪ್ರಸ್ತಾವನೆಯ ಮೇಲೆ ಸೂಕ್ತ ದೃಢೀಕರಣವನ್ನು ನಮೂದಿಸಿ ಈ ಕಛೇರಿಗೆ ಸಲ್ಲಿಸುವುದು.

| |
|---|
| ಮಾನ್ಯ ವ್ಯವಸ್ಥಾಪಕ ನಿರ್ದೇಶಕರು<br>ರವರಿಂದ ಅನುಮೋದಿಸಲ್ಪಟ್ಟಿದೆ |

ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಕವಿಪ್ರನಿನಿ

ಪ್ರತಿಗಳು:

1. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು/ಮೈಸೂರು/ ತುಮಕೂರು/ ಹಾಸನ/ಬಾಗಲಕೋಟೆ/ಕಲಬುರಗಿ.
2. ಮುಖ್ಯ ಇಂಜಿನಿಯರ್(ವಿ)/ಟಿಬಿಸಿ/ಎಸ್‌ಎಲ್‌ಡಿಸಿ, ಕವಿಪ್ರನಿನಿ, ಬೆಂಗಳೂರು.
3. ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಆರ್ಥಿಕ ಸಲಹೆಗಾರರು(ಆಂತರಿಕ ತನಿಖೆ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಎಲ್ಲಾ ಲೆಕ್ಕನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ/ಟಿ.ಬಿ.ಸಿ/ಎಸ್.ಎಲ್.ಡಿ.ಸಿ/ ಕವಿಪ್ರನಿನಿ.
6. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಕಾ ಮತ್ತು ನಿ) ವೃತ್ತಗಳು, ಕವಿಪ್ರನಿನಿ.
7. ಅಧೀಕ್ಷಕ ಇಂಜಿನಿಯರ್(ಐ.ಟಿ), ಕವಿಪ್ರನಿನಿ., ಜಾಲತಾಣದಲ್ಲಿ ಪ್ರಕಟಿಸಲು.
8. ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಪ್ರಸರಣ(ಕಾ ಮತ್ತು ನಿ) ವೃತ್ತಗಳು, ಕವಿಪ್ರನಿನಿ.
9. ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿಗಳು (ಆಂತರಿಕ ತನಿಖೆ), ಪ್ರಸರಣ ವಲಯಗಳು, ಕವಿಪ್ರನಿನಿ.
10. ಎಲ್ಲಾ ಕಾರ್ಯನಿರ್ವಹಕ ಇಂಜಿನಿಯರ್(ವಿ), ಕವಿಪ್ರನಿನಿ, ಟಿ.ಎಲ್ ಮತ್ತು ಎಸ್.ಎಸ್/ ಬೃಹತ್ ಕಾಮಗಾರಿ ವಿಭಾಗಗಳು.
11. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ, ಟಿ.ಎಲ್ ಮತ್ತು ಎಸ್.ಎಸ್/ ಬೃಹತ್ ಕಾಮಗಾರಿ ವಿಭಾಗಗಳು.
12. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ), ಕವಿಪ್ರನಿನಿ ರವರ ಎಲ್ಲಾ ಹಿರಿಯ ಆಪ್ತಕಾರ್ಯದರ್ಶಿಗಳು.